ii) ರಾಜಾಜಿನಗರದ ಶಿವನಹಳ್ಳಿ ಗ್ರಾಮದಲ್ಲಿರುವ ಸರ್ಕಾರಿ ಜಮೀನಿನಲ್ಲಿ ಕಾಲೇಜನ್ನು ಕಟ್ಟಿಸಿಕೊಡುವ ಬಗ್ಗೆ.

ಶ್ರೀ ಎಂ. ಎಸ್. ಕೃಷ್ಣನ್.—ರಾಜಾಜಿನಗರದಲ್ಲಿರುವ ಶಿವನಹಳ್ಳಿ ಗ್ರಾಮದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಯಿದೆ. ಈ ಶಾಲೆಯ ಎದುರಿನಲ್ಲಿ ಸುಮಾರು ೪ ಎಕರೆ ಜಮೀನಿದೆ. ಇದು ಸರ್ಕಾರಕ್ಕೆ ಸೇರಿದ ಜಮೀನೆಂದು ತಿಳಿದು ಬಂದಿದೆ. ಆದರೆ, ಈ ಜಾಗವನ್ನು ತಮ್ಮವರ ಕೈಗೆ ತೆಗೆದು ಕೊಳ್ಳಲು ಕೆಲವು ರೌಡಿಸ್ಟ್ ಇಲಾಖೆಯ ಅಧಿಕಾರಿಗಳೂ, ಪಟ್ಟಭದ್ರ ಹಿತಶಕ್ತಿಗಳೂ ಪ್ರಯತ್ನ ಪಡುತ್ತಿದ್ದಾರೆ. ಸರ್ವೆ ನಂ. ೮೯/೧೧ರಲ್ಲಿರುವ ಈ ಪ್ರದೇಶದಲ್ಲಿ ಸರ್ಕಾರಿ ಕಾಲೇಜನ್ನು ಕಟ್ಟಿಕೊಡ ಬೇಕೆಂದು ಅಲ್ಲಿನ ಜನ ಬಯಸಿದ್ದಾರೆ. ನಿಧಿ ವಸೂಲಿ ಮಾಡಿಕೊಂಡು ತಯಾರಿದ್ದಾರೆ. ಈ ಪ್ರದೇಶ ವೆಲ್ಲವೂ ಕಾರ್ಪೊರೇಷನ್ನಿನ ಸುಪರ್ದಿಯಲ್ಲಿದೆ ಎಂದೂ ತಿಳಿದಿದೆ. ಹೀಗಿದ್ದರೂ ಸಹ ಅಲ್ಲಿ ಮುಳ್ಳು ಬೇಲಿಯನ್ನು ಕೆಲವರು ಹಾಕಿಕೊಳ್ಳಲು ಯತ್ನಿಸುತ್ತಿದ್ದಾರೆ. ಈ ವಿಷಯವನ್ನು ಕಾರ್ಪೊರೇಷನ್ನಿನ ಗಮನಕ್ಕೆ ತರಲಾಗಿದೆ, ಮಾನ್ಯ ಶಿಕ್ಷಣ ರಾಜ್ಯ ಸಚಿವರಿಗೂ ಈ ವಿಷಯವನ್ನು ಅಲ್ಲಿನ ಜನರು ತಿಳಿಸಿದ್ದಾರೆ. ಈ ಪ್ರದೇಶ ಕಾರ್ಪೊರೇಷನ್ನಿನ ಜಮೀನಾಗಿ ಉಳಿಸಲು ಕೂಡಲೇ ತೀವ್ರ ಕಾರ್ಯ ಕ್ರಮ ಹಾಕಿಕೊಳ್ಳಬೇಕಾಗಿದೆ, ಸಮಯ ಮೀರಿದ ನಂತರ ಏನೂ ಮಾಡಲು ಸಾಧ್ಯವಾಗದು. ಆದ್ದರಿಂದ ಇದರ ಬಗ್ಗೆ ಮಾಹಿತಿ ತರಿಸಿ ಹೇಳಿಕೆ ನೀಡಬೇಕೆಂದು ಮಾನ್ಯ ನಗರಾಭಿವೃದ್ಧಿ ಸಚಿವರನ್ನು ಪ್ರಾರ್ಥಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್(ನಗರಾಭಿವೃದ್ಧಿ ಮತ್ತು ಕಾನೂನು ಸಚಿವರು).—ಸನ್ಮಾನ್ಯ ಅಧ್ಯಕ್ಷರೇ, ಜಾಗ ಕೊಡಿಸುವ ಬಗ್ಗೆ ಮಾನ್ಯ ಸದಸ್ಯರು ಕೇಳಿದ್ದಾರೆ. ಈ ಜಾಗ ಕಾರ್ಪೊರೇಷನ್ನಿಗೆ ಸೇರಿದೆಯೋ, ಅಥವಾ ಖಾಸಗಿಯವರಿಗೆ ಸೇರಿದೆಯೋ ಗೊತ್ತಿಲ್ಲ. ನಾನು ವಿಚಾರ ಮಾಡಿ ಅವರಿಗೆ ವರದಿ ಕಳಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಇದು ಕಾರ್ಪೊರೇಷನ್ನಿಗೆ ಸೇರಿದ್ದು ಎಂದು ಒತ್ತಿಒತ್ತಿ ಹೇಳಿದ್ದೇನೆ.

ಅಧ್ಯಕ್ಷರು —ಇದರ ಬಗ್ಗೆ ಚರ್ಚೆಗೆ ಅವಕಾಶ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ವಿಚಾರಿಸುತ್ತೇನೆ.

iii) ಮಂಜ್ರಾ ನದಿ ನೀರು ಕಲುಷಿತಗೊಂಡಿರುವುದರ ಬಗ್ಗೆ.

ಶ್ರೀ ಮೊಹಮದ್ ಲೈಕುದ್ದೀನ್(ಬೀದರ್),—Sir,

a) whether the Government is aware of the hardsihps of the people of Bidar City due to contamination of drinking water supplied to them from Manjra River

b) is it not a fact that water pollution is due to letting of the refused matter of mollasses after distillation of liquor without treatment by the Indian Breweries Limited in Manjra River and its Tributory Narnja (Karanja) stream. Consumption of polluttedwater has resulted into the death of fish and animals of the area,

c) what remedial measures the Government has taken in this regard, within what period clean and healthy water will be supplied to Bidar City,

d) whether any action is taken against the said Company ?

ಶ್ರೀ ಜಿ. ನಾರಾಯಣಕುಮಾರ್.—ಇವರು ಇನ್ನೂ ಕನ್ನಡ ಕಲಿತುಕೊಂಡಿಲ್ಲವಲ್ಲ ಸ್ವಾಮಿ ?

ಶ್ರೀ ಎಂ ರಾಮಪ್ಪ.—ಮಾನ್ಯ ಅಧ್ಯಕ್ಷರೇ, ಇವರು ನಮ್ಮ ಹಕ್ಕುಚ್ಯುತಿ ಮಾಡುತ್ತಿದ್ದಾರೆ, ಕನ್ನಡ ಬಾರದೇ ಇದ್ದರೆ ಬೇರೆ ಭಾಷೆಯಲ್ಲಿ ಮಾತನಾಡಲೇ ಬಾರದು ಎಂದು ಇದೆಯೇನು ?

ಅಧ್ಯಕ್ಷರು.—ನಿಮ್ಮ ಹಕ್ಕುಚ್ಯುತಿ ರಕ್ಷಣೆ ಮಾಡಲಿಕ್ಕೆ ನಾನು ಇಲ್ಲಿ ಇದ್ದೇನೆ. ಅವರಿಗೆ ಅವಕಾಶ ಕೊಟ್ಟಿದ್ದೇನೆ, ಅವರು ಕೇಳಿದ್ದಾರೆ.

ಶ್ರೀ ಎ ಲಕ್ಷ್ಮೀಸಾಗರ್(ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ, ಈ ಸಕ್ಕರೆ ಕಾರ್ಖಾನೆಯಿಂದ ಕಲುಷಿತ ನೀರು ನದಿಯನ್ನು ಸೇರುತ್ತಿದೆ ಎನ್ನುವ ವಿಚಾರ ತಿಳಿದೊಡನೆ ತಕ್ಷಣ ಅಧಿಕಾರಿಗಳು ನೀರು ಬಿಡದಂತೆ ಮಾಡಿದ್ದಾರೆ. ಮಾಂಜ್ರಾ ನದಿಯಿಂದ ನೂರಂ ಕಿಲೋಮೀಟರ್ ಹರಿದ ನಂತರ ಬೀದರ್ ನಗರದ ಜನರಿಗೆ ನೀರು ಸರಬರಾಜು ಆಗುತ್ತಿದೆ. ಇದರಿಂದ ತೊಂದರೆ ಎನೂ ಇಲ್ಲ. ನೀರನ್ನು ಪರೀಕ್ಷಿಸಿ ನೋಡಲಾಗಿದೆ. ನೀರಿನ ಬಣ್ಣ ಇನ್ನೂ ಸ್ವಲ್ಪ ಉಳಿದಿದೆ. ಇನ್ನು ಒಂದೆರಡು ದಿನಗಳಲ್ಲಿ ಇದು ಹೊರಟು ಹೋಗುತ್ತದೆ. ತೊಂದರೆ ಏನೂ ಇಲ್ಲ. ನಗರದ ಜನತೆಗೆ ಶುದ್ಧ ನೀರನ್ನು ಒದಗಿಸಲಾಗುವುದು.

(IV) ಗ್ರಾಮಾಂತರ ಪ್ರದೇಶದಲ್ಲಿರುವ ಹಳ್ಳಿಗಳಲ್ಲಿ ದಾರಿ ದೀಪದ ಬಲ್ಬುಗಳನ್ನು ಸರಿಯಾಗಿ ಪೂರೈಕೆ ಮಾಡದೇ ಇರುವ ಬಗ್ಗೆ

ಶ್ರೀ ಮಲ್ಲಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಕರ್ನಾಟಕ ಗ್ರಾಮಾಂತರ ಪ್ರದೇಶದಲ್ಲಿರುವ ಪ್ರತಿಯೊಂದು ಹಳ್ಳಿಗೆ ಸರಕಾರದಿಂದ ಪೂರೈಕೆ ಮಾಡಬೇಕಾದ ದಾರಿದೀಪದ ಬಲ್ಬುಗಳನ್ನು ಸರಿಯಾಗಿ ಕೊಡದೆ ಇರುವುದರಿಂದ ಸಾಕಷ್ಟು ರೈತಾಪಿ ವರ್ಗಕ್ಕೆ ಹಾಗೂ ಹಳ್ಳಿಗಾಡಿನಲ್ಲಿರುವ ಜನರಿಗೆ ಕತ್ತಲೆಯಲ್ಲಿ ಹಳ್ಳಿಗಳನ್ನು ಕಾಣಬೇಕಾಗಿದ್ದು, ಇದರಿಂದಾಗಿ ಜನರಿಗೆ ತೊಂದರೆಯಾಗಿದೆ. ನಾನು ನನ್ನ ಮತದಾರ ಕ್ಷೇತ್ರಕ್ಕೆ ಹೋದಾಗ ಈ ವಿಷಯವನ್ನು ಕೇಳಿದಾಗ ಜಿಲ್ಲಾ ಕಛೇರಿಗಳಲ್ಲಿ ಈ ಬಗ್ಗೆ ಯಾವುದೇ ತರಹದ ವ್ಯವಸ್ಥೆ ಸರಕಾರದಿಂದ ನೇರವಾಗಿ ಕೈಗೊಳ್ಳಲು ತಿಳಿಸದೇ ಇರುವುದರಿಂದ ಅವರು ಅಸಹಾಯಕರೆಂದು ತಿಳಿದುಬಂದಿದೆ ಹಳ್ಳಿಗಾಡು ಪ್ರದೇಶದಲ್ಲಿರುವ ಪ್ರತಿಯೊಂದು ಕಂಬಗಳಿಗೆ ಯೋಗ್ಯ ಬೆಳಕು ಬೀರುವ ಬಲ್ಬುಗಳನ್ನು ಕೊಟ್ಟು ಆಗುತ್ತಿರುವ ತೊಂದರೆಯನ್ನು ನಿವಾರಿಸುವಂತೆ ಹಾಗೂ ಸಮಯಕ್ಕೆ ಸರಿಯಾಗಿ ವಿದ್ಯುತ್ ಪೂರೈಕೆ ಒದಗಿಸಿ ಕತ್ತಲೆಯನ್ನು ಹೋಗಲಾಡಿಸಲು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ತೀವ್ರ ಕ್ರಮ ಕೈಗೊಳ್ಳುವಂತೆ ಆದೇಶ ನೀಡಬೇಕಾಗಿ ಸರಕಾರವನ್ನು ಒತ್ತಾಯಿಸಲು ಈ ಸೂಚನೆಯನ್ನು ನೀಡುತ್ತಿದ್ದೇನೆ.

ಶ್ರೀ ಬಿ.ಆರ್. ಯಾವಗಲ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ರಾಜ್ಯ ಸಚಿವರು).—ಮಾನ್ಯ ಸದಸ್ಯರು ವಿಷಯವನ್ನು ಹೇಳಿದ್ದಾರೆ. ಇದರ ಬಗ್ಗೆ ಮಾಹಿತಿ ಈಗ ಇಲ್ಲ. ವಿವರ ತರಿಸಿ ಅವರಿಗೆ ಉತ್ತರ ಕೊಡಲಾಗುವುದು.

(V) ಬೆಳಗಾವಿಯ ಅನಗೋಳದಲ್ಲಿ ಸರ್ಕಾರಿ ಕನ್ನಡ ಗಂಡು ಮಕ್ಕಳ ಶಾಲೆಯ ಕಟ್ಟಡವನ್ನು ಕಟ್ಟಲು ಮರಾಠಿಗರು ಅಡ್ಡಿ ಪಡಿಸುತ್ತಿರುವ ಬಗ್ಗೆ

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೇ, ಬೆಳಗಾವಿ ಅನಗೋಳದಲ್ಲಿನ ಸರಕಾರಿ ಕನ್ನಡ ಗಂಡು ಮಕ್ಕಳ ಶಾಲೆಯ ಕಟ್ಟಡ ಕಟ್ಟಲು ಮರಾಠಿಗರು ಅಡ್ಡಿಪಡಿಸುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಗಮನಕ್ಕೆ ಬಂದಿದ್ದರೆ ಮರಾಠಿಗರ ಪುಂಡಾಟಿಕೆಯ ವಿರುದ್ಧ ಸರ್ಕಾರ ಕ್ರಮ ಕೈಗೊಂಟಿದೆಯೆ? ಅಲ್ಲಿನ ಪೋಲೀಸರು ಮರಾಠಿಗರೊಂದಿಗೆ ಶಾಮೀಲಾಗಿ ಇಂಥ ಕನ್ನಡ ವಿರೋಧಿ ನೀತಿಗೆ ಬೆಂಬಲ ನೀಡುತ್ತಿದ್ದಾರೆ ಎಂದು ಅನುಮಾನ ಬಂದಿದೆ. ಇದಕ್ಕೆ ಮಾನ್ಯ ಶಿಕ್ಷಣ ಸಚಿವರು ಉತ್ತರಿಸುವರೇ?

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—ಬೆಳಗಾವಿಯ ಅನಗೋಳ ವಿಸ್ತರಣದಲ್ಲಿ ಸುಮಾರು ನೂರು ಮೀಟರುಗಳ ಅಂತರದಲ್ಲಿ ಕನ್ನಡ ಮತ್ತು ಮರಾಠಿ ಪ್ರಾಥಮಿಕ ಶಾಲೆಗಳಿವೆ. ಮರಾಠಿ ಶಾಲೆಗೆ ತನ್ನದೇ ಆದ ಕಟ್ಟಡವಿದೆ. ಕನ್ನಡ ಶಾಲೆಯಲ್ಲಿ ೧೫೦ ಮಕ್ಕಳು ಓದುತ್ತಿದ್ದು, ಸೂಕ್ತ ಕಟ್ಟಡವಿಲ್ಲ.